## ನಿರ್ದೇಶಕ ಸ್ಟೀಫನ್ ಹಾಕಿನ್ಸ್



ಜಮೈಕಾದಲ್ಲಿ ಹುಟ್ಟಿ ಇಂಗ್ಲೆಂಡ್, ಆಸ್ಟ್ರೇಲಿಯಾಗಳಲ್ಲಿ ಬೆಳೆದ ಸ್ಟೀಫನ್ ಹಾಕಿನ್ಸ್ ಚಿತ್ರರಂಗಕ್ಕೆ ಕಾಲಿಟ್ಟಿದ್ದು ಸ್ಟೋರಿ ಬೋರ್ಡ್ ಕಲಾವಿದರಾಗಿ. ಬಳಿಕ ಕಲಾನಿರ್ದೇಶಕರಾಗಿ ಕೆಲಸ ಮಾಡಿದ ಅವರು ಆನಂತರ ಟೆಲಿವಿಷನ್ ಹಾಗೂ ಸಿನಿಮಾಗಳನ್ನು ನಿರ್ದೇಶಿಸಲಾರಂಭಿಸಿದರು.

ಹತ್ತು ಸಿನಿಮಾ, ಹತ್ತಾರು ಟೆಲಿವಿಷನ್ ಸರಣಿಗಳನ್ನು ನಿರ್ದೇಶಿಸಿರುವ ಹಾಕಿನ್ಸ್ ಅವರಿಗೆ ಹೆಸರು ತಂದುಕೊಟ್ಟ ಚಿತ್ರ 'ದಿ ಲೈಫ್ ಅಂಡ್ ಡೆತ್ ಆಫ್ ಪೀಟರ್ ಸೆಲ್ಲರ್ಸ್'. ಇದು ಕೂಡ ನಿಜ ಜೀವನ ಆಧರಿಸಿದ ಚಿತ್ರ. ಹಾಕಿನ್ಸ್ ನಿರ್ದೇಶಿಸಿದ ಇತರ ಕೆಲವು ಚಿತ್ರಗಳೆಂದರೆ, 'ಪ್ರಿಡೆಕ್ಟರ್', 'ಬ್ಲೋನ್ ಅವೇ', 'ಜಡ್ಜ್‌ಮೆಂಟ್ ನೈಟ್'.

'ರೇಸ್' ಚಿತ್ರಕ್ಕಾಗಿ ಕ್ರೀಡಾಪಟು ಜೆಸ್ಸಿ ಓವೆನ್ಸ್ ಬದುಕನ್ನು ಆಳವಾಗಿ ಅಭ್ಯಾಸ ಮಾಡಿ, ಕ್ರೀಡಾಕ್ಷೇತ್ರದ ಹಲವು ಪರಿಣತರ ನೆರವು ಪಡೆದು ತಯಾರಾದ ಸ್ಟೀಪನ್‌ರ ಈ ಸಿನಿಮಾ ವಾಸ್ತವಕತೆಗೆ ಹತ್ತಿರವಾದ ಚಿತ್ರವೆಂದು ರಸಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಓವೆನ್ಸ್ ಅನುಭವಿಸುವ ಅವಮಾನಗಳ ಘಟನೆಗಳನ್ನು ಅನಾವರಣಗೊಳಿಸುತ್ತದೆ. ವಾಸ್ತವವಾಗಿ ಓವೆನ್ಸ್ ಕಪ್ಪು ಜನಾಂಗಕ್ಕೆ ಆಗುತ್ತಿದ್ದ ತಾರತಮ್ಯವನ್ನು ಸ್ವತಃ ಅನುಭವಿಸಬೇಕಾದಂತಹ ಸ್ಥಿತಿ ಅದು.

ಒಲಿಂಪಿಕ್ಸ್ ಗುರಿಯನ್ನು ಮುಟ್ಟುವ ವಿಶ್ವಾಸವನ್ನು ಹೊಂದಿದ್ದ ಓವೆನ್ಸ್‌ಗೆ ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕುವುದಕ್ಕೆ ಮುನ್ನ ಎದುರಾಗುವ ಸಂಕಷ್ಟಗಳು ಹತ್ತಾರು ಬಗೆಯದಾಗಿದ್ದವು. ಹಿಟ್ಲರ್ ಆಳ್ವಿಕೆಯ ಜರ್ಮನಿ ಕರಿಯ ಹಾಗೂ ಯಹೂದಿ ಕ್ರೀಡಾಪಟುಗಳು ಒಲಿಂಪಿಕ್ಸ್‌ಗೆ ಬರದಂತೆ ತಡೆ ಒಡ್ಡುತ್ತಿದ್ದರೆ ಅಮೆರಿಕ ಕ್ರೀಡಾ ಪರಿಷತ್ತಿನಲ್ಲಿ ಕೆಲವು ಹಿತಾಸಕ್ತಿಗಳು ಇದೇ ಕಾರಣವನ್ನು ಮುಂದಿಟ್ಟುಕೊಂಡು ಇಡೀ ಕ್ರೀಡಾಕೂಟಕ್ಕೆ ಬಹಿಷ್ಕಾರ ಹಾಕುವ ಹುನ್ನಾರದಲ್ಲಿರುತ್ತವೆ.

ಬರ್ಲಿನ್ ಒಲಿಂಪಿಕ್ಸ್‌ಗೆ ಅಮೆರಿಕದ ತಂಡ ಭಾಗವಹಿಸುವ ನಿರ್ಧಾರ ತೂಗೂಯ್ಯಾಲೆಯಲ್ಲಿರುವಾಗಲೇ ಇತ್ತ ಜೆಸ್ಸಿ ಓವೆನ್ಸ್ ಕಠಿಣ ತರಬೇತಿಯ ನಡುವೆ ಬಿಳಿಯ ಸಹಕ್ರೀಡಾಪಟುಗಳಿಂದ ನಿರಂತರ ಮಾನಸಿಕ ಕ್ಷೋಭೆಗೆ ಒಳಗಾಗಬೇಕಾಗುತ್ತದೆ. ಆದರೆ ಇದರ ಬಗ್ಗೆ ನಿರ್ಲಕ್ಷ್ಯ ತೋರುವಂತೆ ಹಾಗೂ ಕ್ರೀಡಾ ಸ್ಪರ್ಧೆಯಲ್ಲಿ ಹೆಚ್ಚಿನ ಗುರಿ ಇಡಲು ಕೋಚ್ ನೀಡುವ ಸಲಹೆ ಓವೆನ್ಸ್ ಮನಸ್ಸು ಹತೋಟಿಯಲ್ಲಿಡಲು ಸಹಾಯ ಮಾಡುತ್ತದೆ.

ದೊಡ್ಡ ಕುಟುಂಬದ ಸದಸ್ಯ ಜೆಸ್ಸಿ ಓವೆನ್ಸ್. ಮಗ ಅಂದುಕೊಂಡಿದ್ದನ್ನು ಸಾಧಿಸುತ್ತಾನೆಂಬ ವಿಶ್ವಾಸ ಆತನ ತಾಯಿಗೆ. ಕಾಲೇಜು ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿದ್ದ ಜೆಸ್ಸಿ ಜೀವನದಲ್ಲಿ ಶ್ರೀಮಂತ ಸುಂದರಿಯೊಬ್ಬಳ ಪ್ರವೇಶವಾಗುತ್ತದೆ. ಆದರೆ ಆ ವೇಳೆಗೆ ರೂತ್ ಎಂಬಾಕೆಯೊಂದಿಗೆ ಜೆಸ್ಸಿ ಬದುಕು ನಡೆಸಿ ಒಂದು ಮಗುವಿನ ತಂದೆಯಾಗಿರುತ್ತಾನೆ. ಕ್ಲಬ್